# ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 82 (02) |
| ಮಾನ್ಯ ಸದಸ್ಯರ ಹೆಸರು | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.12.2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಉಂಟಾಗಿದ್ದ ಎಂಡೋಸಲ್ಫಾನ್ ವಿಷಕಾರಿ ಘಟನೆಯ ಪರಿಶೀಲನಾ ವರದಿಯ ಅನ್ವಯ ಘಟನೆಯ ಕಾರಣ/ ಪರಿಣಾಮಗಳು ಯಾವುವು; ಕರಾವಳಿ ಜಿಲ್ಲೆಗಳಲ್ಲಿ ಇದರ ತೀವ್ರತೆಯಿಂದ ಪ್ರಸ್ತುತ ಬಳಲುತ್ತಿರುವವರ ಪ್ರಮಾಣ ಎಷ್ಟು; (ಜಿಲ್ಲಾವಾರು, ಲಿಂಗವಾರು ವಿವರ ಒದಗಿಸುವುದು) | ಕರ್ನಾಟಕ ಗೇರು ಅಭಿವೃದ್ಧಿ ನಿಗಮದವರು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗೇರು ತೋಪುಗಳಿಗೆ ಎಂಡೋಸಲ್ಫಾನ್ ಕ್ರಿಮಿನಾಶಕವನ್ನು ಸಿಂಪಡಣೆ ಮಾಡಲಾಗಿದೆ. ಈ ಪ್ರದೇಶಗಳ ಪರಿಶೀಲನೆಯನ್ನು ಮಾಡಿದ್ದರಿಂದ, ಆ ಭಾಗದ ಜನರು ವಿಶೇಷ ಕಾಯಿಲೆಗಳಿಂದ ಬಳಲುತ್ತಿರುವುದು ಕಂಡು ಬಂದಿರುತ್ತದೆ. ಅವುಗಳಲ್ಲಿ, ಹೆಚ್ಚಿನದಾಗಿ ಬುದ್ಧಿ ಮಾಂದ್ಯತೆ, ನರ ಸಂಬಂಧಿ ಕಾಯಿಲೆ, ದೇಹದ ಅಂಗವಿಕಲತೆ ಹಾಗೂ ಹುಟ್ಟು ಅಂಗವೈಕಲ್ಯತೆ ಮುಂತಾದ ತೊಂದರೆಗಳಿಂದ ಬಳಲುತ್ತಿರುವುದು ಕಂಡು ಬಂದಿರುತ್ತದೆ.<br><br>ಪ್ರಸ್ತುತ ಕರಾವಳಿ ಜಿಲ್ಲೆಗಳಲ್ಲಿ ಎಂಡೋಸಲ್ಫಾನ್ ತೀವ್ರತೆಯಿಂದ ಬಳಲುತ್ತಿರುವವರ ಪ್ರಮಾಣವನ್ನು ಈ ಕೆಳಕಂಡಂತೆ ನೀಡಿದೆ:- (ಜಿಲ್ಲಾವಾರು, ಲಿಂಗವಾರು ವಿವರಗಳು) |

| ಕ್ರ. ಸಂ. | ಜಿಲ್ಲೆಗಳು | ಪುರುಷ | ಮಹಿಳೆ | ಮಕ್ಕಳು | ಒಟ್ಟು |
|---|---|---|---|---|---|
| 1 | ದಕ್ಷಿಣ ಕನ್ನಡ | 1,334 | 1,431 | 1,545 | 4,310 |
| 2 | ಉತ್ತರ ಕನ್ನಡ | 451 | 456 | 713 | 1,620 |
| 3 | ಉಡುಪಿ | 676 | 638 | 417 | 1,731 |
| | ಒಟ್ಟು | 2,461 | 2,525 | 2,675 | 7,661 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ | ಎಂಡೋಸಲ್ಫಾನ್ ಪೀಡಿತ ಪ್ರದೇಶ/ ಜಿಲ್ಲೆಗಳಲ್ಲಿ ಜನಿಸುತ್ತಿರುವ ಮಕ್ಕಳು ಇಂದಿಗೂ ಇದರ ಪರಿಣಾಮ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಗರ್ಭಿಣಿಯರಿಗೆ ಯಾವುದಾದರೂ ಔಷಧಗಳನ್ನು ನೀಡಲಾಗುತ್ತಿದೆಯೇ; (ವಿವರ ನೀಡುವುದು) | ಬಂದಿದೆ.<br><br>ಹುಟ್ಟಿನಿಂದಲೇ ಅಂಗವೈಕಲ್ಯ ಮಕ್ಕಳು ಜನಿಸುತ್ತಿರುವುದಕ್ಕೆ ಎಂಡೋಸಲ್ಫಾನ್ ಕ್ರಿಮಿನಾಶಕವೇ ಕಾರಣ ಎಂಬುದರ ಬಗ್ಗೆ ಯಾವ ಅಧ್ಯಯನದಲ್ಲಿಯೂ ದೃಢಪಟ್ಟಿರುವುದಿಲ್ಲ.<br><br>ಎಂಡೋಸಲ್ಫಾನ್ ಒಂದು Multiple Syndromme ಕಾಯಿಲೆಯಾಗಿದ್ದು, ರೋಗ-ಲಕ್ಷಣಗಳಿಗೆ ಅನುಗುಣವಾದ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಈ ಕಾಯಿಲೆಗೆ ನಿರ್ದಿಷ್ಟವಾದ ಯಾವುದೇ ಔಷಧವಿರುವುದಿಲ್ಲ. ಆದರೆ ಗರ್ಭಿಣಿಯರನ್ನು ನಿಯಮಿತವಾಗಿ ನಾಲ್ಕು (4) ವಾರಕ್ಕೊಮ್ಮೆ ತಪಾಸಣೆ ಮಾಡಲಾಗುತ್ತಿದೆ. ಗರ್ಭಾವಸ್ಥೆ ಅವಧಿಯಲ್ಲಿ ಒಮ್ಮೆ Anomaly Scan ಮಾಡಲಾಗುತ್ತಿದೆ. |

| | | |
|---|---|---|
| ಇ | ಯಾವುದೇ ಔಷಧಿ ಇಲ್ಲವಾದಲ್ಲಿ ಕೇಂದ್ರ ಸರ್ಕಾರಕ್ಕೆ ಔಷಧಿ ತಯಾರಿಸಲು ಸೂಕ್ತ ಶಿಫಾರಸ್ಸು ಮಾಡಲು ಕೈಗೊಂಡಿರುವ ಕ್ರಮಗಳಾವುವು. | • ಎಂಡೋಸಲ್ಫಾನ್ ಖಾಯಿಲೆಗೆ ನಿರ್ದಿಷ್ಠ ಔಷಧ ಇಲ್ಲದಿರುವ ಕಾರಣ, ರೋಗ-ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ಈಗಾಗಲೇ ಸ್ಪೇಷಾಲ್ಟಿ/ಸೂಪರ್ ಸ್ಪೇಷಾಲ್ಟಿ ಆಸ್ಪತ್ರೆಗಳಲ್ಲಿ ಶುಲ್ಕ ರಹಿತ ಚಿಕಿತ್ಸೆ ಹಾಗೂ ಸಂತ್ರಸ್ತರು ಇತರೇ ಆಸ್ಪತ್ರೆಗಳಲ್ಲಿ ಪಡೆದ ಔಷಧಿ ಮತ್ತು ವೈದ್ಯಕೀಯ ವೆಚ್ಚವನ್ನು ಸಂತ್ರಸ್ತರಿಗೆ ಮರು ಪಾವತಿ ಮಾಡಲಾಗುತ್ತಿದೆ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಅಗತ್ಯತೆ ಕಂಡು ಬರುವುದಿಲ್ಲ.<br><br>• ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಟ್ಟು 11 ಮೊಬೈಲ್ ವೈದ್ಯಕೀಯ ಘಟಕಗಳು ಸಂಚರಿಸುತ್ತಿದ್ದು, ಸಂತ್ರಸ್ತರಿಗೆ ಅವಶ್ಯವಿರುವ ಆರೋಗ್ಯ ಸೇವೆಗಳನ್ನು ಮನೆಯಲ್ಲಿಯೇ ನೀಡಲಾಗುತ್ತಿದೆ.<br><br>• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಈ ಕೇಂದ್ರದಲ್ಲಿ 30 ರಿಂದ 40 ಸಂತ್ರಸ್ತರನ್ನು ವಾಹನದಲ್ಲಿ ಕರೆ ತಂದು, ಉಪಹಾರ, ಊಟ ಮತ್ತು ಸಾಯಂಕಾಲ ಉಪಾಹಾರಗಳನ್ನು ನೀಡಿ, ವಾಪಸ್ಸು ಸಾಯಂಕಾಲ ವಾಹನದಲ್ಲಿಯೇ ಮನೆ ಮನೆಗಳಿಗೆ ತಲುಪಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕೇಂದ್ರದಲ್ಲಿ ಫಿಸಿಯೋಥೆರಪಿ, ಕೌಶಲ್ಯ ತರಬೇತಿ, ಸ್ಪೀಚ್ ಥೆರಪಿ, ಅಕ್ಷರಾಭ್ಯಾಸ ಹಾಗೂ ಪೌಷ್ಠಿಕ ಆಹಾರಗಳನ್ನು ನೀಡಲಾಗುತ್ತಿದೆ. |
| ಈ | ಈ ಖಾಯಿಲೆಯಿಂದ ಪೀಡಿತ ಮಕ್ಕಳಿಗೆ ನೆರವಾಗಲು ಹಾಗೂ ಪಾಲಕರಿಲ್ಲದ ಮಕ್ಕಳನ್ನು ಪೋಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಎಂಡೋಸಲ್ಫಾನ್ ಪೀಡಿತ ಮಕ್ಕಳಿಗೆ ನೆರವಾಗಲು ಹಾಗೂ ಪಾಲಕರಿಲ್ಲದ ಮಕ್ಕಳನ್ನು ಪೋಷಿಸಲು ಕೈಗೊಂಡ ಕ್ರಮಗಳು.<br><br>• ಈ ಖಾಯಿಲೆಯಿಂದ ಪೀಡಿತ ಮಕ್ಕಳಿಗೆ ನೆರವಾಗಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಎರಡು ಪಾಲನಾ ಕೇಂದ್ರಗಳನ್ನು ತೆರೆಯಲಾಗಿದೆ. ಮಕ್ಕಳನ್ನು ಕೇಂದ್ರದ ವಾಹನಗಳಲ್ಲಿ ಪಾಲನಾ ಕೇಂದ್ರಗಳಿಗೆ ಕರೆತಂದು, ಲಘು ಉಪಾಹಾರ, ಊಟ ಮತ್ತು ಸಾಯಂಕಾಲ ಉಪಾಹಾರಗಳನ್ನು ನೀಡಿ, ಸಾಯಂಕಾಲ ವಾಹನದಲ್ಲಿಯೇ ಅವರವರ ಮನೆಗಳಿಗೆ ತಲುಪಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕೇಂದ್ರಗಳಲ್ಲಿ ಮಕ್ಕಳಿಗೆ ಫಿಸಿಯೋಥೆರಪಿ, ಕೌಶಲ್ಯ ತರಬೇತಿ, ಸ್ಪೀಚ್ ಥೆರಫಿ, ಅಕ್ಷರಾಭ್ಯಾಸ ಹಾಗೊ ಪೌಷ್ಠಿಕ ಆಹಾರಗಳನ್ನು ನೀಡಲಾಗುತ್ತಿದೆ.<br><br>• ಎಲ್ಲಾ ಎಂಡೋ ಸಂತ್ರಸ್ತರಿಗೆ ಗುರುತಿನ ಚೀಟಿ ವಿತರಣೆ ಮಾಡಲಾಗಿದೆ.<br><br>• ಶೇ.25 ರಿಂದ ಶೇ.60 ರ ವರೆಗೆ ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ ರೂ.2,000/-ಗಳು ಮತ್ತು ಶೇ.60ಕ್ಕೂ ಮೇಲ್ಪಟ್ಟು ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ ರೂ.4,000/-ಗಳ ಮಾಸಿಕ ಮಿತ ವೇತನವನ್ನು ಕಂದಾಯ ಇಲಾಖೆಯಿಂದ ಸಂತ್ರಸ್ತರ ಖಾತೆಗೆ ಪಾವತಿಸಲಾಗುತ್ತಿದೆ.<br><br>• ಶೇ.25 ಕ್ಕಿಂತ ಕಡಿಮೆ ಅಂಗವಿಕಲತೆ ಇರುವ ಎಲ್ಲಾ ಫಲಾನುಭವಿಗಳಿಗೆ ಆರೋಗ್ಯ ಸೇವೆಗಳನ್ನು ಉಚಿತವಾಗಿ ಆರೋಗ್ಯ ಇಲಾಖಾ ವತಿಯಿಂದ ನೀಡಲಾಗುತ್ತಿದೆ. ವಿಶೇಷ ತಜ್ಞ ವೈದ್ಯರ ಶಿಬಿರಗಳನ್ನು ಎಲ್ಲಾ ಜಿಲ್ಲೆಗಳ ತಾಲ್ಲೂಕು ವ್ಯಾಪ್ತಿಯಲ್ಲಿ ನಡೆಸಲಾಗುತ್ತಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ, ಒಡಂಬಡಿಕೆ ಮಾಡಿಕೊಳ್ಳಲಾದ ಆಸ್ಪತ್ರೆಗಳಿಗೆ ಕಳುಹಿಸಿ, ಅಗತ್ಯ ಚಿಕಿತ್ಸೆ ಒದಗಿಸಲಾಗುತ್ತಿದೆ. |

| | | |
|---|---|---|
| | | • ಸ್ಪೇಷಾಲ್ಟಿ/ಸೂಪರ್ ಸ್ಪೇಷಾಲ್ಟಿ ಆಸ್ಪತ್ರೆಗಳಲ್ಲಿ ಶುಲ್ಕ ರಹಿತ ಚಿಕಿತ್ಸೆ ಹಾಗೂ ಸಂತ್ರಸ್ತರು ಇತರೆ ಆಸ್ಪತ್ರೆಗಳಲ್ಲಿ ಪಡೆದ ಔಷಧಿ ಮತ್ತು ವೈದ್ಯಕೀಯ ವೆಚ್ಚವನ್ನು ಸಂತ್ರಸ್ತರಿಗೆ ಮರು ಪಾವತಿ ಮಾಡಲಾಗುತ್ತಿದೆ.<br><br>• ಎಂಡೋಸಲ್ಫಾನ್ ಸಂತ್ರಸ್ತರಿಗೆ ಕೆ.ಎಸ್.ಆರ್.ಟಿ.ಸಿ. ವತಿಯಿಂದ ಎಂಡೋಸಲ್ಫಾನ್ ಸಂತ್ರಸ್ತರಿಗೆ ಹಾಗೂ ಅವರೊಂದಿಗೆ ಪ್ರಯಾಣಿಸುವ ಒಬ್ಬ ಸಹಾಯಕರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿ ಬರಲು ಉಚಿತ ಬಸ್ ಪಾಸ್ ಸೇವೆ ನೀಡಲಾಗಿದೆ.<br><br>• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಈ ಕೇಂದ್ರದಲ್ಲಿ ತಯಾರಿಸಲಾದ ಕೆಲವು ಕರ-ಕುಶಲ ಹಾಗೂ ಅಲಂಕಾರಿಕ ಸಾಮಗ್ರಿಗಳನ್ನು ಮಾರಾಟ ಮಾಡಿ ಅದರಲ್ಲಿ ಬರುವ ಹಣವನ್ನು ಸಂತ್ರಸ್ತರಿಗೆ ನೀಡಲಾಗುತ್ತಿದೆ.<br><br>• ಸಂತ್ರಸ್ತರಲ್ಲಿ ಪಾಲಕರಿಲ್ಲದ ಯಾವುದೇ ಮಕ್ಕಳು ಕಂಡು ಬಂದಿರುವುದಿಲ್ಲ. ಒಂದು ವೇಳೆ ಅಂತಹ ಮಕ್ಕಳು ಕಂಡು ಬಂದಲ್ಲಿ ಆದ್ಯತೆಯ ಮೇರೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಮುಖ್ಯಸ್ಥರ ಗಮನಕ್ಕೆ ತಂದು ಸೂಕ್ತ ವ್ಯವಸ್ಥೆ ಕೈಗೊಳ್ಳಲಾಗುವುದು. |

**ಸಂಖ್ಯೆ: ಆಕುಕ 134 ಎಸ್ಎಂಎಂ 2024.**

( ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 60 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.12.2024 |
| ಉತ್ತರಿಸಬೇಕಾಗಿರುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಧುಗಿರಿ ನಗರದ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಲ್ಲೂಕು ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು? ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು: ಖಾಲಿ ಇರುವ ಹುದ್ದೆಗಳೆಷ್ಟು: (ಸಂಪೂರ್ಣ ವಿವರ ನೀಡುವುದು) | ಮಧುಗಿರಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ಆಸ್ಪತ್ರೆಯ ಹೆಸರು | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಕಾರ್ಯನಿರತ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | GH ಮಧುಗಿರಿ | ಫಿಜಿಷಿಯನ್ | 1 | 0 | 1 |
| 2 | | ಜನರಲ್ ಸರ್ಜನ್ | 1 | 0 | 1 |
| 3 | | ಪ್ರಸೂತಿ & ಸ್ತ್ರೀರೋಗ ತಜ್ಞರು | 1 | 1 | 0 |
| 4 | | ಅರವಳಿಕೆ ತಜ್ಞರು | 1 | 1 | 0 |
| 5 | GH ಮಧುಗಿರಿ | ಮಕ್ಕಳ ತಜ್ಞರು | 1 | 0 | 1 |
| 6 | | ನೇತ್ರ ತಜ್ಞರು | 1 | 0 | 1 |
| 7 | | ಕೀಲು ಮೂಳೆ ತಜ್ಞರು | 1 | 1 | 0 |
| 8 | | ENT ತಜ್ಞರು | 1 | 1 | 0 |
| 9 | | ರೇಡಿಯಾಲಾಜಿಸ್ಟ | 1 | 0 | 1 |
| 10 | | ದಂತ ವೈದ್ಯರು | 1 | 1 | 0 |
| 11 | | ತುರ್ತು ಚಿಕಿತ್ಸಾ ವೈದ್ಯರು | 4 | 1 | 3 |
| 12 | PHC, ಹೊಸಕೆರೆ | GDMO | 1 | 1 | 0 |
| 13 | PHC, ಬ್ಯಾಲ್ಯ | GDMO | 1 | 1 | 0 |
| 14 | PHC, , ಮಿಡಿಗೇಶಿ | GDMO | 1 | 1 | 0 |
| 15 | PHC, ಬಡವನಹಳ್ಳಿ | GDMO | 2 | 1 | 1 |
| 16 | PHC, ಕೊಡಿಗೇನಹಳ್ಳಿ | GDMO | 1 | 0 | 1 |
| 17 | PHC, , ಮರುವೇಕೆರೆ | GDMO | 1 | 0 | 1 |
| 18 | PHC, ಐ.ಡಿ.ಹಳ್ಳಿ | GDMO | 1 | 1 | 0 |
| 19 | PHC, ದೊಡ್ಡೇರಿ | GDMO | 1 | 1 | 0 |
| 20 | PHC, ಕೋಡ್ಲಾಪುರ | GDMO | 1 | 1 | 0 |
| 21 | PHC, ಕವಣದಾಲ | GDMO | 1 | 0 | 1 |
| 22 | PHC, ನೇರಳೇಕೆರೆ | GDMO | 1 | 0 | 1 |
| 23 | PHC, ಗೊಂದಿಹಳ್ಳಿ | GDMO | 1 | 1 | 0 |
| 24 | PHC, ಮುದ್ದೇನಹಳ್ಳಿ | GDMO | 1 | 0 | 1 |
| | | ಒಟ್ಟು | 28 | 14 | 14 |

| | | |
|---|---|---|
| ಆ | ಮಧುಗಿರಿ ನಗರದ ಸಾರ್ವಜನಿಕ ಆಸ್ಪತ್ರೆ ಹಾಗೂ ತಾಲ್ಲೂಕು ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯಿಂದ ಸಾರ್ವಜನಿಕರಿಗೆ ಬಹಳ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ |
| ಇ | ಬಂದಿದ್ದಲ್ಲಿ ಖಾಲಿ ಇರುವ ವೈದ್ಯರನ್ನು ನೇಮಕ ಮಾಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಸಾರ್ವಜನಿಕ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರನ್ನು ನೇಮಕ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಆಕುಕ 619 ಹೆಚ್.ಎಸ್.ಹೆಚ್. 2022, ಬೆಂಗಳೂರು, ದಿನಾಂಕ:17.01.2024 ಮತ್ತು ಆಯುಕ್ತಾಲಯದ ಸುತ್ತೋಲೆ ಪತ್ರ ಸಂಖ್ಯೆ:ಜಿ.ಆರ್.ಓ (1ಎ) 36/2023-24, ದಿನಾಂಕ:27/9/2023ರನ್ವಯ ಹಾಗೂ ತುಮಕೂರು ಜಿಲ್ಲಾಧಿಕಾರಿಗಳ ಅನುಮೋದನೆ ಮೇರೆಗೆ ತುಮಕೂರು ಜಿಲ್ಲೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರು ಹಾಗೂ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡುವುದಾಗಿ, ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದೆಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ತಜ್ಞ ವೈದ್ಯರ ಹುದ್ದೆಗೆ ಒಬ್ಬರು ಮಾತ್ರ ಅರ್ಜಿ ಸಲ್ಲಿಸಿದ್ದು, ಸದರಿಯವರು DCH ತಜ್ಞತೆ ಹೊಂದಿದ್ದರಿಂದ ಮಧುಗಿರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇದ್ದ ಮಕ್ಕಳ ತಜ್ಞರ ಹುದ್ದೆಗೆ ಸದರಿಯವರನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿರುತ್ತದೆ. ಹಾಗೂ ಮಧುಗಿರಿ ತಾಲ್ಲೂಕಿನಲ್ಲಿ ಖಾಲಿ ಇರುವ 6 GDMO ಹುದ್ದೆಗಳಲ್ಲಿ 4 GDMO ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಭರ್ತಿ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.<br><br>ಕ್ರ. ಸಂ / ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾದ ವೈದ್ಯರ ಹೆಸರು / ವಿದ್ಯಾರ್ಹತೆ / ನೇಮಕ ಮಾಡಲಾದ ಆರೋಗ್ಯ ಸಂಸ್ಥೆಯ ಹೆಸರು<br>1 / ಡಾ\|\|ಐಶ್ವರ್ಯ / MBBS, DCH / GH ಮಧುಗಿರಿ<br>2 / ಡಾ\|\| ವಿನೋದ್ ಕುಮಾರ್ / MBBS / PHC ಮುದ್ದೇನಹಳ್ಳಿ<br>3 / ಡಾ\|\|ಕಿರಣ್ ಆರ್ / MBBS / PHC ನೇರಳೇಕೆರೆ<br>4 / ಡಾ\|\|ಗೌತಮ್ ಜಿ / MBBS / PHC ಕವಣದಾಲ<br>5 / ಡಾ\|\|ಚಂದ್ರಶೇಖರ್ / MBBS / PHC ಮರುವೇಕೆರೆ<br><br>ಮಧುಗಿರಿ ತಾಲ್ಲೂಕಿನಲ್ಲಿ ಖಾಲಿ ಇರುವ 4 ತಜ್ಞ ವೈದ್ಯರ ಹಾಗೂ 2 GDMO ಹುದ್ದೆಗಳನ್ನು ಮುಂದಿನ ದಿನಗಳಲ್ಲಿ ಇಚ್ಛೆಯುಳ್ಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಗುತ್ತಿಗೆ ಆಧಾರದ ಮೇಲೆ ಮತ್ತು 03 |

| | | |
|---|---|---|
| | | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ಹುದ್ದೆಗಳನ್ನು ಕಾಲಬದ್ಧ ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಿಕೊಳ್ಳಲಾಗುವುದು.<br><br>1. ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನಿಯಮಾನುಸಾರ ಪರಿಶೀಲಿಸಿ ನೇಮಿಸಲಾಗುತ್ತಿದೆ.<br>2. ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಒಂದು ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞ ವೈದ್ಯ ಅಭ್ಯರ್ಥಿಗಳನ್ನು ವೈದ್ಯರ/ತಜ್ಞರ ಹುದ್ದೆಗಳಿಗೆ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ |

**ಆಕುಕ 62 ಎಚ್‌ಎಸ್‌ಡಿ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 122 |
| ಮಾನ್ಯ ಸದಸ್ಯರ ಹೆಸರು | ಶ್ರೀ.ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.12.2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಬಡರೋಗಿಗಳ ರೋಗ ಪತ್ತೆಗಾಗಿ ಕೇವಲ ಸಿಟಿಸ್ಕ್ಯಾನ್ ಯಂತ್ರ ಮಾತ್ರವೇ ಲಭ್ಯವಿದ್ದು, ರೋಗದ ಸ್ಪಷ್ಟ ಮತ್ತು ಖಚಿತ ಮಾಹಿತಿ ತಿಳಿಯಲು M.R.I ಯಂತ್ರದ ಲಭ್ಯತೆ ಇಲ್ಲದ ಕಾರಣಕ್ಕಾಗಿ ಬಡರೋಗಿಗಳನ್ನು ದೂರದ ವಿಜಯಪುರ, ಹುಬ್ಬಳ್ಳಿ, ಬೆಳಗಾವಿ ನಗರಗಳಿಗೆ ಸೂಚಿಸುವ ಅನಿವಾರ್ಯತೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, M.R.I ಯಂತ್ರಗಳನ್ನು ಯಾವಾಗ ಒದಗಿಸಲಾಗುವುದು; | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಗೆ M.R.I Scan ಸೇವೆಯನ್ನು PPP ಮಾದರಿಯಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಒದಗಿಸಲು ಸಂಖ್ಯೆ:ಆಕುಕ 160 ಎಫ್‌ಪಿಆರ್ 2022 ದಿನಾಂಕ:19.08.2023ರಲ್ಲಿ ಅನುಮೋದನೆ ನೀಡಲಾಗಿದೆ. ಇದರನ್ವಯ M.R.I ಸೇವೆಯನ್ನು ಒದಗಿಸಲು ಕಾರ್ಯ ಪ್ರಗತಿಯಲ್ಲಿದ್ದು, ಅತೀ ಶೀಘ್ರವಾಗಿ ಸಾರ್ವಜನಿಕರಿಗೆ ಸೇವೆಯನ್ನು ಒದಗಿಸಲಾಗುವುದು. |
| ಆ) | ಬಾಗಲಕೋಟೆ ಜಿಲ್ಲಾ ಕೇಂದ್ರವಿದ್ದು, ಕೇಂದ್ರ ಸರ್ಕಾರದ ಅನುದಾನದಿಂದ ಕ್ರಿಟಿಕಲ್ ಕೇರ್ ಸೆಂಟರ್ ಮಾತ್ರ ಆಸ್ಪತ್ರೆಯಲ್ಲಿ ಇದ್ದು, ಸುತ್ತಲು ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವುದರಿಂದ ಅಪಘಾತಗಳು ಹೆಚ್ಚಾಗಿ ಗಾಯಾಳುಗಳಿಗಾಗಿ ಟ್ರೌಮ ಸೆಂಟರ್‌ನ ಅವಶ್ಯಕತೆಯಿರುವುದು ಸರ್ಕಾರ ಗಮನಿಸಿದೆಯೇ, ಹಾಗಿದ್ದಲ್ಲಿ, ಯಾವಾಗ ಟ್ರಾಮಾ (Trauma) ಸೆಂಟರ್ ಸ್ಥಾಪನೆ ಮಾಡಲಾಗುವುದು? | ಕೇಂದ್ರ ಸರ್ಕಾರದ ರಾಷ್ಟ್ರೀಯ ಅಪಘಾತ ಮತ್ತು ಸುಟ್ಟ ಗಾಯಗಳ ತಡೆಗಟ್ಟುವಿಕೆ ಮತ್ತು ನಿರ್ವಹಣಾ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿನ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿನ ತುರ್ತು ಚಿಕಿತ್ಸಾ ವಿಭಾಗವನ್ನು ಮೇಲ್ದರ್ಜೆಗೇರಿಸಿ ಅಪಘಾತಕ್ಕೆ ಒಳಗಾದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುವುದು.<br><br>ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಅನುದಾನದಿಂದ ಜಿಲ್ಲಾ ಆಸ್ಪತ್ರೆ ಬಾಗಲಕೋಟೆಯನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಅಗತ್ಯ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಟೆಂಡರ್ ಪ್ರಕ್ರಿಯೆಯು |

| | | |
|---|---|---|
| | | ಚಾಲ್ತಿಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಮುಗಿದ ನಂತರ ವೈದ್ಯಕೀಯ ಉಪಕರಣಗಳನ್ನು ಒದಗಿಸಲಾಗುವುದು ಹಾಗೂ ರಸ್ತೆ ಅಪಘಾತಕ್ಕೆ ಒಳಗಾದ ಗಾಯಾಳುಗಳನ್ನು ರವಾನಿಸಲು ಒಂದು ಸುಸಜ್ಜಿತ ಅಡ್ವಾನ್ಸ್ ಲೈಫ್ ಸಪೋರ್ಟ್ ಆಂಬ್ಯುಲೆನ್ಸ್‌ನ್ನು ವಿತರಿಸಲಾಗಿದೆ ಹಾಗೂ ಅವಶ್ಯಕವಿದ್ದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ದರ್ಜೆಯ ಆಸ್ಪತ್ರೆಗಳಿಗೆ ತುರ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸಲಾಗುವುದು.<br><br>ರಾಷ್ಟ್ರೀಯ ಅಪಘಾತ ಮತ್ತು ಸುಟ್ಟ ಗಾಯಗಳ ತಡೆಗಟ್ಟುವಿಕೆ ಮತ್ತು ನಿರ್ವಹಣಾ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರತ್ಯೇಕ ಟ್ರಾಮಾ ಕೇರ್ ಸೆಂಟರ್‌ಗಳನ್ನು ಕಲ್ಪಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

ಆಕುಕ 71 ಎಸ್ ಟಿ ಕ್ಯೂ 2024

ದಿನೇಶ್ ಗುಂಡೂರಾವ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಕರ್ನಾಟಕ ವಿಧಾನಸಭೆ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಗೋಪಾಲಕೃಷ್ಣ ಬೇಳೂರು ಇವರು ನಿಯಮ-73ರಡಿ ಪ್ರಸ್ತಾಪಿಸಿರುವ "ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಸಾಗರ ಉಪ ವಿಭಾಗೀಯ ಆಸ್ಪತ್ರೆಯಲ್ಲಿ **ಸುಮಾರು ವರ್ಷಗಳಿಂದ ಕಣ್ಣಿನ ವೈದ್ಯರು ಹಾಗೂ ರೇಡಿಯಾಲಜಿ ವೈದ್ಯರ ಕೊರತೆಯಿಂದ ರೋಗಿಗಳು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರ ಕುರಿತು ಹಾಗೂ ಈ ಸಮಸ್ಯೆಗೆ ತಕ್ಷಣ ವೈದ್ಯರನ್ನು ನೇಮಿಸಲು ಸೂಕ್ತ ಕ್ರಮವಹಿಸುವುದರ ಕುರಿತು**" ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ;

*******

ಸಾರ್ವಜನಿಕ ಆಸ್ಪತ್ರೆ ಸಾಗರ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ ರೇಡಿಯಾಲಜಿ ಹುದ್ದೆಗಳ ಮಂಜುರಾತಿ ಇರುವುದಿಲ್ಲ ಮತ್ತು ಆಸ್ಪತ್ರೆಯಲ್ಲಿರುವ ನೇತ್ರ ತಜ್ಞರ ಹುದ್ದೆಯ ಮುಂಜೂರಾತಿ, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ಮಾಹಿತಿ ಈ ಕೆಳಗಿನಂತಿದೆ.

| ಕ್ರ.ಸಂ | ಹುದ್ದೆಗಳು | ಮಂಜೂರಾದ ಹುದ್ದೆ | ಕಾರ್ಯನಿರತ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1 | ನೇತ್ರ ತಜ್ಞರು | 2 | 0 | 2 |

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಉಪವಿಭಾಗೀಯ ಆಸ್ಪತ್ರೆಯಲ್ಲಿ 02 ಕಣ್ಣಿನ ವೈದ್ಯರ ಹುದ್ದೆ ಮಂಜೂರಾಗಿದ್ದು, ಗುತ್ತಿಗೆ ಆಧಾರದಲ್ಲಿ ನೇತ್ರ ತಜ್ಞರನ್ನು ನೇಮಕ ಮಾಡಿದ್ದು, ದಿನಾಂಕ:01.09.2024 ರಿಂದ ರಾಜೀನಾಮೆ ನೀಡಿರುತ್ತಾರೆ ಆದ್ದರಿಂದ 02 ಹುದ್ದೆಗಳು ಖಾಲಿ ಇರುತ್ತವೆ.

ಆದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕ ಆಸ್ಪತ್ರೆ, ಹೊಸನಗರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೇತ್ರ ತಜ್ಞರನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಉಪವಿಭಾಗೀಯ ಆಸ್ಪತ್ರೆಗೆ **ವಾರದಲ್ಲಿ ಎರಡು ದಿನ ನಿಯೋಜಿಸಿಲಾಗಿರುತ್ತದೆ.**

ಆದೇಶ ಸಂಖ್ಯೆ: ಆಕುಕ 619 HSH 2022, ದಿನಾಂಕ:17.01.2024ರಲ್ಲಿ ಕೆಲವು ಷರತ್ತುಗಳೊಂದಿಗೆ ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ. ಅದರಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಶಿವಮೊಗ್ಗರವರ ಹಂತದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

**ಆಕುಕ 65 ಹೆಚ್‌ಎಸ್‌ಡಿ 2024.**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

<u>ಕರ್ನಾಟಕವಿಧಾನಸಭೆ</u>

**ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ. ಅನಿಲ್ ಚಿಕ್ಕಮಾದು ಇವರು ನಿಯಮ 73 ರಡಿ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ಅಂತರಸಂತೆ ಹೋಬಳಿ ಕೇಂದ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ಆಗದೆ, ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ವೈದ್ಯರಿಲ್ಲದೆ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಹಾಗೂ ನಿರುಪಯುಕ್ತವಾಗಿರುವ ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹುದ್ದೆ ಸಮೇತ ಅಂತರಸಂತೆಗೆ ಸ್ಥಳಾಂತರಿಸುವ ಬಗ್ಗೆ.**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ: -**

- ಸರ್ಕಾರದ ಆದೇಶ ಸಂಖ್ಯೆ:-ಆಕುಕ/251/ಸಿಜಿಎಂ/2016, ದಿನಾಂಕ:-06-10-2016 ರಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ, ಅಂತರಸಂತೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಲೆಕ್ಕಶೀರ್ಷಿಕೆ 4210-80-800-0-01-423 (TSP-Unspent- 2013) ರಲ್ಲಿ ಅನುದಾನ ಬಿಡುಗಡೆಯಾಗಿದ್ದು ಕಟ್ಟಡ ನಿರ್ಮಾಣವಾಗಿರುತ್ತದೆ. **(ವಿವರ ಅನುಬಂಧದಲ್ಲಿ ನೀಡಲಾಗಿದೆ)**

- ಆಯುಕ್ತರು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ:-HSP(3)/29/2020-21 (E-1491626), ದಿನಾಂಕ:-26-11-2024 ರಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರದಲ್ಲಿರುವ ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹುದ್ದೆಗಳ ಸಮೇತ ಅಂತರಸಂತೆಗೆ ಸ್ಥಳಾಂತರಿಸಲು ಹಾಗೂ ಅವಶ್ಯವಿರುವ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲು ಆವರ್ತಕವೆಚ್ಚದ ಮಾಹಿತಿಯೊಂದಿಗೆ ಸ್ವೀಕೃತವಾಗಿರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ

**ಆಕುಕ 137 ಎಸ್ಎಂಎಂ 2024**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17 ನೇ ಸಾಲಿನ ರಾಜ್ಯವಲಯದ ಯೋಜನೆಯ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡಿರುವ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕಿನ ಅಂತರಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಕಾಮಗಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನ ಉಲ್ಲಾಳ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಘಟಕ ನಿರ್ಮಾಣ/ವಸತಿ ಗೃಹಗಳ ನಿರ್ಮಾಣ ಹಾಗೂ ಬಜ್ಪೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜನಿಯರ್, ಕೆ.ಹೆಚ್.ಎಸ್.ಡಿ.ಆರ್.ಪಿ. ಬೆಂಗಳೂರು ಪತ್ರಸಂಖ್ಯೆ:ಆಕುಕ/ಕೆಹೆಚ್ಎಸ್‌ಡಿಆರ್‌ಪಿ/ಮುಇಂ/ರಾಜ್ಯವಲಯ-ಕಾಮಗಾರಿಗಳು/2016-17/836, ದಿನಾಂಕ:25.07.2016.

*******

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜನಿಯರ್, ಕೆ.ಹೆಚ್.ಎಸ್.ಡಿ.ಆರ್.ಪಿ. ಬೆಂಗಳೂರು ರವರು 2016-17 ನೇ ಸಾಲಿನ ರಾಜ್ಯವಲಯದ ಯೋಜನೆಯ ಕ್ರಿಯಾ ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ಕಲ್ಪಿಸಿಕೊಂಡಿರುವ ಅನುದಾನ ಲಭ್ಯತೆ ಅನುಗುಣವಾಗಿ ಈ ಕೆಳಕಂಡ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಕಟ್ಟಡ ಕಾಮಗಾರಿಗಳ ನಿರ್ಮಾಣದ ವಿವರ | ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುವ ಅಂದಾಜು ಮೊತ್ತ |
|---|---|---|---|---|
| 1 | 2 | 3 | 4 | 6 |
| **4210-80-800-0-01-423(TSP-Unspent-2013)** | | | | |
| 1. | ಮೈಸೂರು | ಹೆಚ್.ಡಿ. ಕೋಟೆ | ಅಂತರ ಸಂತೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ | 140.00 |
| | | ಒಟ್ಟು | | 140.00 |

S.V
06/10/16

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಕಟ್ಟಡ ಕಾಮಗಾರಿಗಳ ನಿರ್ಮಾಣದ ವಿವರ | ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿರುವ ಅಂದಾಜು ಮೊತ್ತ |
|---|---|---|---|---|
| 1 | 2 | 3 | 4 | 6 |
| **4210-01-110-1-01-059(ಇತರೆ ವೆಚ್ಚಗಳು)** | | | | |
| 2. | ದಕ್ಷಿಣ ಕನ್ನಡ | ಮಂಗಳೂರು | ಉಲ್ಲಾಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ಡಯಾಲಿಸಿಸ್ ಘಟಕ ನಿರ್ಮಾಣ, ಶವಾಗಾರ ನಿರ್ಮಾಣ, ವೈದ್ಯರ ದಾದಿಯರ ಹಾಗೂ ಗ್ರೂಪ್ 'ಡಿ' ವಸತಿಗೃಹಗಳ ನಿರ್ಮಾಣ ಕಾಮಗಾರಿ | 550.00 |
| 3. | ದಕ್ಷಿಣ ಕನ್ನಡ | ಮಂಗಳೂರು | ಬಜ್ಪೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ | 145.00 |
| ಒಟ್ಟು | | | | 695.00 |
| ಒಟ್ಟಾರೆ(3 ಕಾಮಗಾರಿಗಳಿಗೆ) | | | | 835.00 |

2016-17ನೇ ಸಾಲಿನ ರಾಜ್ಯವಲಯದ ಬಂಡವಾಳ ವೆಚ್ಚದ ಲೆಕ್ಕ ಶೀರ್ಷಿಕೆಗಳಡಿ ಕೈಗೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನಾ ಪಟ್ಟಿಗೆ ಅನುಮೋದನೆ ನೀಡಲಾಗಿರುತ್ತದೆ. ಕ್ರ.ಸಂ:2 ಮತ್ತು 3ರಲ್ಲಿನ ಹೊಸ ಕಾಮಗಾರಿಗಳು ಸದರಿ ಕ್ರಿಯಾ ಯೋಜನೆಯಲ್ಲಿ ಸೇರಿರುತ್ತವೆ.

2016-17ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ ರಾಜ್ಯವಲಯದ ಯೋಜನೆಯ ಕ್ರಿಯಾ ಯೋಜನೆಯಡಿ ಇದರಲ್ಲಿ "ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತವನ್ನು ಆಸ್ಪತ್ರೆಗಳ ಕಟ್ಟಡಗಳ ನಿರ್ಮಾಣ/ಉನ್ನತೀಕರಣ" ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯು ಅನುಮೋದನೆ ನೀಡಿರುತ್ತದೆ. ಅಂತೆಯೇ, ಕ್ರ.ಸಂ:1 ರಲ್ಲಿನ ಕಾಮಗಾರಿಯು ಈ ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೊಂಡಿರುತ್ತದೆ.

ಮುಖ್ಯ ಇಂಜಿನಿಯರ್, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ ಅವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 251 ಸಿಜಿಎಂ 2016,</u>**
**<u>ಬೆಂಗಳೂರು, ದಿನಾಂಕ: 06.10.2016</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ:

| ಕ್ರ ಸಂ | ಕಟ್ಟಡ ಕಾಮಗಾರಿಗಳ ನಿರ್ಮಾಣದ ವಿವರ | ಆಡಳಿತಾತ್ಮಕ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| **4210-80-800-0-01-423(TSP-Unspent-2013)** | | |
| 1. | ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕಿನ ಅಂತರಸಂತೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ | 140.00 |
| | ಒಟ್ಟು | 140.00 |

ಆಯುಕ್ತರವರ ಕಛೇರಿ ಸಂಖ್ಯೆ 18 OCT 2016

1907 28/10/16

S.V 06/10/16

| ಕ್ರ ಸಂ | ಕಟ್ಟಡ ಕಾಮಗಾರಿಗಳ ನಿರ್ಮಾಣದ ವಿವರ | ಆಡಳಿತಾತ್ಮಕ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| | 4210-01-110-1-01-059(ಇತರೆ ವೆಚ್ಚಗಳು) | |
| 2. | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಉಲ್ಲಾಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ಡಯಾಲಿಸಿಸ್ ಘಟಕ ನಿರ್ಮಾಣ, ಶವಾಗಾರ ನಿರ್ಮಾಣ, ವೈದ್ಯರ ದಾದಿಯರ ಹಾಗೂ ಗ್ರೂಪ್ 'ಡಿ' ವಸತಿಗೃಹಗಳ ನಿರ್ಮಾಣ ಕಾಮಗಾರಿ | 550.00 |
| 3. | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬಜ್ಪೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ | 145.00 |
| | ಒಟ್ಟು | 695.00 |
| | ಒಟ್ಟಾರೆ(3 ಕಾಮಗಾರಿಗಳಿಗೆ) | 835.00 |

(ಎಂಟು ನೂರಾ ಮೂವತ್ತೈದು ಲಕ್ಷ ರೂಪಾಯಿಗಳು ಮಾತ್ರ)

ಕ್ರ.ಸಂ:1 ರಲ್ಲಿನ ಕಾಮಗಾರಿಗೆ ಅಗತ್ಯವಿರುವ ಅನುದಾನವನ್ನು 2016-17 ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: **4210-80-800-0-01-423 (TSP-Unspent-2013)** ರಡಿಯಿಂದ ಕ್ರ.ಸಂ:2 ಮತ್ತು 3 ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ:4210-01-110-1-01-059 (ಇತರೆ ವೆಚ್ಚಗಳು) ರಡಿ ಕಲ್ಪಿಸಿಕೊಂಡಿರುವ ಮೊತ್ತದಿಂದ ಭರಿಸತಕ್ಕದ್ದು. ಪ್ರಸ್ತಾಪಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ/ವಸತಿ ಗೃಹಗಳ ನಿರ್ಮಾಣ ಕಾಮಗಾರಿಗಳ ಸ್ಥಳ ಬದಲಾವಣೆ ಮಾಡತಕ್ಕದ್ದಲ್ಲ. ಸದರಿ ಕಾಮಗಾರಿಗಳಿಗೆ ತಾಂತ್ರಿಕ ಸಲಹಾ ಸಮಿತಿ ಸಭೆಯ ಅನುಮೋದನೆಯನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಆಕುಕ 895(ಬಿ) ಆಂಆಸ 2016, ದಿನಾಂಕ:26.09.2016ರನ್ವಯ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2015, ದಿನಾಂಕ:02.01.2016ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

CE
KHSDRP

S.V
06/10/16

(ಎಸ್.ವಿ.ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್.ಎ) ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ:5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ:5329, ಬೆಂಗಳೂರು-560 001.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ರಾಜ್ಯ ಯೋಜನಾಡಳಿತಾಧಿಕಾರಿ, ಕೆ.ಹೆಚ್.ಎಸ್.ಡಿ.ಆರ್.ಪಿ., ಶೇಷಾದ್ರಿ ರಸ್ತೆ, ಬೆಂಗಳೂರು.
5. ಮುಖ್ಯ ಅಭಿಯಂತರರು, ಕೆ.ಹೆಚ್.ಎಸ್.ಡಿ.ಆರ್.ಪಿ., ಶೇಷಾದ್ರಿ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪಿ.ಪಿ. ಗೋಪುರ, ಬೆಂಗಳೂರು.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
8. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮೈಸೂರು ಮತ್ತು ದಕ್ಷಿಣ ಕನ್ನಡ
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ - 2

ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,

ಆನಂದರಾವ್ ವೃತ್ತ, ಬೆಂಗಳೂರು. Email jdplankar@gmail.com

ಸಂ.ಡಿ. ಯೋ.ಕಾಕಿ.(3)99/2020-21 ದಿನಾಂಕ: 2[illegible] 08.2020

ಇವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ಗ್ರಾಮಕ್ಕೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದರ ಬಗ್ಗೆ.

ಉಲ್ಲೇಖ:- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಮೈಸೂರು ಜಿಲ್ಲೆ ಇವರ ಪತ್ರ ಸಂ: ಆಭಿವೃದ್ಧಿ 28/2019-20 ದಿನಾಂಕ:19-10-2019

----------

ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿನ ಅಂತರಸಂತೆ ಗ್ರಾಮವು ಹೆಚ್ಚಾಗಿ ಬುಡಕಟ್ಟು ಹಾಗು ಗಿರಿಜನರು ವಾಸಿಸುವ ಪ್ರದೇಶವಾಗಿರುತ್ತದೆ. ಈ ಗ್ರಾಮಕ್ಕೆ 201[illegible] ರಾಜ್ಯವಲಯದ ಯೋಜನೆಯ ಕಿರಿಯಾ ಯೋಜನೆಯಡಿ ಸರ್ಕಾರದ ಆದೇಶ ಸಂ. [illegible] 251 ಸಿಪಿಎಂ 2016 ಬೆಂಗಳೂರು ದಿನಾಂಕ: 06-01-2016ರಲ್ಲಿ "ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಉಳಿದ ಮೊತ್ತವನ್ನು ಆಸ್ಪತ್ರೆಗಳ ಕಟ್ಟಡಗಳ ನಿರ್ಮಾಣ/ಉನ್ನತೀಕರಣ" ಕಾರ್ಯಕ್ರಮದಡಿಯಲ್ಲಿ ರೂ. 140.00 ಲಕ್ಷ ರೂಪಾಯಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ.

ಸದರಿ ಕಟ್ಟಡವನ್ನು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ವಶಕ್ಕೆ ನೀಡಲಾಗಿರುತ್ತದೆ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿರುವುದಿಲ್ಲ. ಅಂತರ ಸಂತೆ ಗ್ರಾಮದಲ್ಲಿ 2011ರ ಜನಗಣತಿಯಂತೆ 8850 ಜನಸಂಖ್ಯೆಯನ್ನು ಹೊಂದಿದ್ದು, ಹೋಬಳಿ ಕೇಂದ್ರವಾಗಿರುತ್ತದೆ. ಹೋಬಳಿಯ ಒಟ್ಟು ಜನಸಂಖ್ಯೆ 53000 ಆಗಿರುತ್ತದೆ. ಈ ಗ್ರಾಮದ ಜನರಿಗೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಬುಡಕಟ್ಟು ಹಾಗೂ ಗಿರಿಜನರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆಯನ್ನು ಮನಗಂಡು ಸರ್ಕಾರವು ಲೆಕ್ಕಶೀರ್ಷಿಕೆ 4210-80-800-01-423(TSP-Unspent -2013)ರಡಿಯಲ್ಲಿ ಕಟ್ಟಡವನ್ನು ಈಗಾಗಲೇ ನಿರ್ಮಾಣ ಮಾಡಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಅಂತರ ಸಂತೆ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಈ ಕೆಳಕಂಡ ಹುದ್ದೆಗಳೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿದೆ.

ಈ ಪ್ರಾಥಮಿಕ ಆರೋಗ್ಯ ಕೇಂದ್ರದ ಮಂಜೂರಾತಿ ಹಾಗೂ ಇಲ್ಲಿಗೆ ಅಗತ್ಯ ವೈದ್ಯಕೀಯ ಮತ್ತು ವೈದ್ಯಕೀಯೇತರ ಸಿಬ್ಬಂದಿಗಳನ್ನು ಸಾರ್ಮ್ಸ ಪ್ರಕಾರ :-

| ಕ್ರಮ ಸಂ | ಹುದ್ದೆಗಳ | ಅಗತ್ಯ ಸಂಖ್ಯೆ |
|---|---|---|
| 1 | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | 01 |
| 2 | ಶುಶ್ರೂಷಕಿ | 01 |
| 3 | ಪ್ರ.ದ.ಸ/ದ್ವಿ.ದಸ. | 01 |
| 4 | ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞ | 01 |
| 5 | ಕಿರಿಯ ಫಾರ್ಮಸಿಸ್ಟ್ | 01 |
| 6 | ಕಿರಿಯ ಮಹಿಳಾ ಆರೋಗ್ಯ ಸಹಾಯಕಿ | 01 |
| 6 | ಗ್ರೂಪ್.ಡಿ. ನೌಕರರು | 02 |
| | ಒಟ್ಟು | 08 |

ಈ ಹುದ್ದೆಗಳ ಮಂಜೂರಾತಿಯಾಗಬೇಕಾಗಿರುತ್ತದೆ.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಅಂತರಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೇಕಾಗುವ ಅವರ್ತಕ ವೆಚ್ಚದ ವಿವರ.

| ಹುದ್ದೆಗಳ ವಿವರ | ಬೇಕಾಗಿರುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | | ವಾರ್ಷಿಕ ವೇತನ | ತುಟ್ಟಿ ಭತ್ಯೆ 11.25% | ಒಟ್ಟೂ |
|---|---|---|---|---|---|---|
| ವೈದ್ಯಾಧಿಕಾರಿ | 1 | 56800 | 99600 | 938400 | 105570 | 1043970 |
| ಶುಶ್ರೂಷಕರು | 1 | 33450 | 62600 | 576300 | 64834 | 641134 |
| ಫಾರ್ಮಾಸಿಸ್ಟ | 1 | 27650 | 52650 | 481800 | 54203 | 536003 |
| ಪ್ರ. ಶಾ. ತಂತ್ರಜ್ಞರು | 1 | 30350 | 58250 | 531600 | 59805 | 591405 |
| ಪ್ರ.ದ.ಸಹಾಯಕರು | 1 | 27650 | 52650 | 481800 | 54203 | 536003 |
| ಕಿರಿಯ ಮಹಿಳಾ ಆರೋಗ್ಯ ಸಹಾಯಕಿ | 1 | 23500 | 47650 | 309400 | 34808 | 344208 |
| ಗ್ರೂಫ್-ಡಿ | 2 | 17000 | 28950 | 551400 | 62033 | 613433 |
| ಒಟ್ಟು | 8 | 216400 | 402350 | 3870700 | 435456 | 4306156 |

ಈಗಾಗಲೇ ಹೊಸದಾಗಿ ಕಟ್ಟಡ ನಿರ್ಮಾಣ ಆಗಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚ ಅವಶ್ಯಕವಿರುವುದಿಲ್ಲ.

| ಆವರ್ತಕ ವೆಚ್ಚ | ರೂಗಳು |
|---|---|
| ವೇತನ | 38.70 ಲಕ್ಷ |
| ತುಟ್ಟಿ ಭತ್ಯೆ | 4.35 ಲಕ್ಷ |
| ಒಟ್ಟು | 43.05 ಲಕ್ಷ |

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

ಅನುಬಂಧ - ೨

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ
ಆರೋಗ್ಯ ಸೌಧ, 6ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು.

Phone/Fax No                                                                                    E mail: [illegible]

ಸಂಖ್ಯೆ: ಕುಕಲ್ಯಾ ಪಿ(3)29/2020-21(E-1491626)                                        ದಿನಾಂಕ: 26-11-2024

ಇವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸ ಸೌಧ,
ಬೆಂಗಳೂರು

ಮಾನ್ಯರೆ,

ವಿಷಯ: ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಂತರಸಂತೆಗೆ ಹುದ್ದೆ ಸಮೇತ ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಶಾಸಕರು, ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರ ಇವರ ಪತ್ರ ಸಂಖ್ಯೆ: ಹೆಡಿಕೋ/ಶಾ/ವಿಕ್ಷೇಕ/235/2023-24 ದಿನಾಂಕ 01-122023
2. ಸರ್ಕಾರದ ಪತ್ರ ಸಂಖ್ಯೆ: ಆಕುಕ/199/ಸಿಜಿಇ/2020, ದಿನಾಂಕ 18-07-2024.
3. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 30-08-2024
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಅಭಿವೃದ್ಧಿ/81/ 2021-22

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ಪತ್ರದಲ್ಲಿ ಮಾನ್ಯ ಶಾಸಕರ ಪತ್ರದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕು ಹಿಂದುಳಿದ ತಾಲ್ಲೂಕಾಗಿದ್ದು, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿರುವುದರಿಂದ, ಪ್ರಸ್ತುತ ಪ್ರಾಥಮಿಕ ಆರೋಗ್ಯ ಕೇಂದ್ರದ ಹುದ್ದೆಗಳು ತಾಲ್ಲೂಕು ಆಸ್ಪತ್ರೆಯಲ್ಲೇ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಅಂತಸಂತೆಯಲ್ಲಿ 4210-80-800-0-01-423 (TSP-Unspent- 2013) ರಲ್ಲಿ ಕಟ್ಟಡ ನಿರ್ಮಾಣವಾಗಿದ್ದು, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಹುದ್ದೆಗಳನ್ನು ಅಂತರಸಂತೆಗೆ ವರ್ಗಾಯಿಸಲು ಕೋರಿರುತ್ತಾರೆ.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಂತರಸಂತೆಗೆ ಹುದ್ದೆ ಸಮೇತ ಸ್ಥಳಾಂತರಿಸುವ ಬಗ್ಗೆ, ಜನಸಂಖ್ಯೆಗನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವ ಬಗ್ಗೆ ಪರಿಶೀಲಿಸಿ ಸಲ್ಲಿಸಲು ಉಲ್ಲೇಖಿತ (2)ರ ಸರ್ಕಾರದ ಪತ್ರದಲ್ಲಿ ನಿರ್ದೇಶಿಸಲಾಗಿದೆ.

ಅದರಂತೆ, ಉಲ್ಲೇಖಿತ (3)ರ ಪತ್ರದಲ್ಲಿ ಅಂತರಸಂತೆಗೆ ಹುದ್ದೆಗಳ ಸಮೇತ ವರ್ಗಾಯಿಸಲು ಪರಿಶೀಲಿಸಿ ಸಲ್ಲಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಗಿತ್ತು.

ಮುಂದುವರೆದು, 2027ರ ಜನಸಂಖ್ಯೆಯನ್ವಯ (Decling Growth method) ಹೆಚ್.ಡಿ.ಕೋಟೆ ತಾಲ್ಲೂಕಿನ ಜನಸಂಖ್ಯೆ 2,01,373 ಜನಸಂಖ್ಯೆ ಇದ್ದು, 10 ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅವಕಾಶವಿದ್ದು, ಪ್ರಸ್ತುತ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು [illegible] 6 [illegible] ಆರೋಗ್ಯ ಕೇಂದ್ರಗಳು [illegible]

O/C

① copy
27/11/24

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ
ಆರೋಗ್ಯ ಸೌಧ, 6ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು.
Phone/Fax No. E-mail ld-jdplankar@gmail.com



ಈ ಹಿನ್ನಲೆಯಲ್ಲಿ, ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಅಂತರಸಂತೆಗೆ ಹುದ್ದೆ ಸಮೇತ ಸ್ಥಳಾಂತರಿಸಲು ಈ ಕೆಳಕಂಡ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸುತ್ತಾ, ಮುಂದಿನ ಆದೇಶ ಕೋರಲಾಗಿದೆ.

1. ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹುದ್ದೆಗಳನ್ನು ಸ್ಥಳಾಂತರಿಸಬೇಕಾಗಿರುವ ಮತ್ತು ನೂತನವಾಗಿ ಸೃಜಿಸ ಬೇಕಾಗಿರುವ ಹುದ್ದೆಗಳ ವಿವರ ಅನುಬಂಧ-1
2. ನೂತನವಾಗಿ ಸೃಜಿಸಬೇಕಾಗಿರುವ ಹುದ್ದೆಗಳಿಗೆ ಬೇಕಾಗುವ ಆವರ್ತಕ ವೆಚ್ಚದ ವಿವರ ಅನುಬಂಧ-2.

ತಮ್ಮ ನಂಬುಗೆಯ,

K. B. [signature] 2/11

ಆಯುಕ್ತರು,
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ
ಆರೋಗ್ಯ ಸೌಧ, 6ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು.

Phone/Fax No E-mail id-jdplankar@gmail.com

## ಅನುಬಂಧ-1

### ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹುದ್ದೆಗಳನ್ನು ಸ್ಥಳಾಂತರಿಸಬೇಕಾಗಿರುವ ಮತ್ತು ನೂತನವಾಗಿ ಸೃಜಿಸ ಬೇಕಾಗಿರುವ ಹುದ್ದೆಗಳ ವಿವರ

| ಕ್ರ ಸಂ | ಹುದ್ದೆಗಳ ವಿವರ | 2014ರ ನಾರ್ಮ್ಸ್ ಅನ್ವಯ ಇರಬೇಕಾದ ಹುದ್ದೆಗಳ ಸಂಖ್ಯೆ | ಹೆಚ್.ಡಿ.ಕೋಟೆ ಪ್ರಾ.ಆ.ಕೇಂದ್ರದಿಂದ ಸ್ಥಳಾಂತರಿಸಬೇಕಾದ ಹುದ್ದೆ & ಲೆಕ್ಕಶೀರ್ಷಿಕೆ ವಿವರ | ಹೊಸದಾಗಿ ಸೃಜಸಬೇಕಾದ ಹುದ್ದೆಗಳು. |
|---|---|---|---|---|
| 1 | ವೈದ್ಯಾಧಿಕಾರಿ | 1 | - | 6 |
| 2 | ಶುಶ್ರೂಷಕರು | 1 | - | 1 |
| 3 | ಫಾರ್ಮಸಿಸ್ಟ್ | 1 | - | 1 |
| 4 | ಕಿ ಪ್ರ ಶಾ. ತಂತ್ರಜ್ಞರು | 1 | 1 (ಲೇ ಶಿ. 2210-00-101-0-27) | 0 |
| 5 | ಪ್ರ ದ ಸಹಾಯಕರು | 1 | - | 1 |
| 6 | ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು/ಹಿರಿಯ ಮಹಿಳಾ ಆರೋಗ್ಯ ಸಹಾಯಕರು/ಹಿರಿಯ ಆರೋಗ್ಯ ಸಹಾಯಕರು (3 ವೃಂದಗಳ ಪೈಕಿ ಒಬ್ಬರು) | 1 | 1 ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು (ಲೇ ಶಿ. 2210-00-106-0-02) | 0 |
| 7 | ಗ್ರೂಪ್-ಡಿ | 2 | | 2 |
| | ಒಟ್ಟು ಹುದ್ದೆಗಳು | 8 | 2 | 6 |

ಸಹ ನಿರ್ದೇಶಕರು,
(ಆರೋಗ್ಯ ಮತ್ತು ಯೋಜನೆ),
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ
ಆರೋಗ್ಯ ಸೌಧ, 6ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು.
Phone/Fax No E-mail ld-jdplankar@gmail.com

ಅನುಬಂಧ-2.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೃಜಿಸಬೇಕಾಗಿರುವ ಹುದ್ದೆಗಳಿಗೆ ಬೇಕಾಗುವ ಆವರ್ತಕ ವೆಚ್ಚದ ವಿವರ.

| ಕ್ರ ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | | ಮಧ್ಯಮ ಬಿಂದು | ವಾರ್ಷಿಕ ವೇತನ | ತುಟ್ಟಿ ಭತ್ಯೆ 8.25% | ಒಟ್ಟು |
|---|---|---|---|---|---|---|---|---|
| | | | ಕನಿಷ್ಠ | ಗರಿಷ್ಠ | | | | |
| 1 | ವೈದ್ಯಾಧಿಕಾರಿ | 1 | 83700 | 155200 | 119450 | 1433400 | 118256 | 1551656 |
| | ವಿಶೇಷ ಭತ್ಯೆ | | 42600 | 44800 | 43700 | 524400 | - | 524400 |
| 2 | ಶುಶ್ರೂಷಕರು | 1 | 54175 | 99400 | 76788 | 921450 | 76020 | 997470 |
| 3 | ಫಾರ್ಮಸಿಸ್ಟ್ | 1 | 44425 | 83700 | 64063 | 768750 | 63422 | 832172 |
| 4 | ಪ್ರ.ದ.ಸಹಾಯಕರು | 1 | 44425 | 83700 | 64063 | 768750 | 63422 | 832172 |
| 5 | ಗ್ರೂಪ್ ಡಿ | 2 | 27000 | 46675 | 36837.5 | 884100 | 72938 | 957038 |
| | ಒಟ್ಟು ಹುದ್ದೆಗಳು | 6 | | | | 5300850 | 394057 | 5694907 |

| ಆವರ್ತಕ ವೆಚ್ಚ | ರೂ. ಲಕ್ಷಗಳಲ್ಲಿ |
|---|---|
| ವೇತನ | 53 |
| ತುಟ್ಟಿ ಭತ್ಯೆ | 3.94 |
| ಒಟ್ಟು | 56.94 |

ಸಹ ನಿರ್ದೇಶಕರು,
(ಆರೋಗ್ಯ ಮತ್ತು ಯೋಜನೆ),
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.